# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 7-1-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

**ಪಾಮೆಣ್ಣೆ ದರ ದುರ್ಬಲ ಸ್ಥಿತಿ ಮುಂದುವರಿಕೆ**

ಮಲೇಶಿಯಾದ ಡಿಸೆಂಬರ್ ತಿಂಗಳ ಪಾಮೆಣ್ಣೆ ಉತ್ಪಾದನೆ ನವೆಂಬರ್‌ಗಿಂತ ಇಳಿಕೆಯಾಗಿದೆ. ಹಾಗೂ ದಾಸ್ತಾನು ಕೂಡಾ ಇಳಿಕೆಯಾಗಿದೆ. ಹಾಗೇಯೇ ಬೇಡಿಕೆ ರಫ್ತು ಇಳಿಕೆಯಾಗಿದೆ. ಇಂಡೋನೇಶಿಯಾ ತನ್ನ ದೇಶೀ ಪೂರೈಕೆ ಸಾಕಷ್ಟು ಲಭ್ಯವಾಗಲು ರಫ್ತು ಅನುಪಾತ ಇಳಿಕೆ ಮಾಡಿದೆ. ಇತರ ಖಾದ್ಯ ತೈಲ ದರ ಇಳಿಕೆ, ಬೇಡಿಕೆ ಇಳಿಕೆ ಹಾಗೂ ಇಂಡೋನೇಶೀಯಾದ ವ್ಯಾಪಾರಿಗಳ ಡಿಸ್ಕೌಂಟ್ ಮಾರಾಟ ಇವುಗಳಿಂದ ದರ ದುರ್ಬಲ ಸ್ಥಿತಿಯಲ್ಲಿ ಮುಂದುವರಿಯುತ್ತಿದೆಯೆನ್ನಲಾಗಿದೆ.

**ಬ್ಯಾಡಗಿ ಮೆಣಸಿನಕಾಯಿ ಹೊಸ ಬೆಳೆ ಆವಕ ಪ್ರಾರಂಭ**

ಮಾರುಕಟ್ಟೆಗೆ ಹೊಸಬೆಳೆಯ ಬ್ಯಾಡಗಿ ಮೆಣಸು ಆವಕ ನಿಧಾನವಾಗಿ ಹೆಚ್ಚಳವಾಗುತ್ತಿದೆಯೆನ್ನಲಾಗಿದೆ. ಹೊಸ ಬೆಳೆ ಆವಕವಾದಾಗಲೂ ಗಣನೀಯ ಪ್ರಮಾಣದ ದರ ಇಳಿಕೆಯಾಗಿಲ್ಲ ಹಾಗೂ ಈಗ ಆವಕ ಹೆಚ್ಚಳವಾಗುತ್ತಿದ್ದರೂ ದರ ಹೆಚ್ಚಿನ ಇಳಿಕೆ ಕಾಣುತ್ತಿಲ್ಲ. ಮುಂದಿನ ದಿನಗಳಲ್ಲಿ ಆವಕ ಗಣನೀಯ ಹೆಚ್ಚಳವಾದರೆ ದರ ಇಳಿಕೆಯಾಗುವ ಸಾಧ್ಯತೆಯಿದೆ. ಈ ತಿಂಗಳ ಅಂತ್ಯ ಅಥವಾ ಮುಂದಿನ ತಿಂಗಳ ಆರಂಭದಲ್ಲಿ ದರದ ಸ್ಥಿತಿ ನಿರ್ಧಾರವಾಗುವ ಸಾಧ್ಯತೆಯಿದೆ.

**ಹೈದರಾಬಾದ್‌ನಲ್ಲಿ ಗೋದ್ರೆಜ್‌ನಿಂದ ರೂ.250 ಕೋಟಿಯ ಖಾದ್ಯತೈಲ ಸಂಸ್ಕರಣಾ ಘಟಕ**

ದೇಶದ ದೊಡ್ಡ ಪಾಮ್ ತೋಟಗಾರಿಕಾ ಕಂಪೆನಿ ತೆಲಂಗಾಣದ ಹೈದರಾಬಾದ್‌ನಲ್ಲಿ ರೂ.250 ಕೋಟಿ ವೆಚ್ಚದಲ್ಲಿ ಪಾಮೆಣ್ಣೆ ಸಂಸ್ಕರಣಾ ಘಟಕ ಸ್ಥಾಪಿಸಲಿದೆಯೆನ್ನಲಾಗಿದೆ. 2025-26 ರ ವೇಳೆಗೆ ಘಟಕ ಪೂರ್ಣಪ್ರಮಾಣದ ಕಾರ್ಯಾಚರಣೆಗೆ ಲಭ್ಯವಾಗಲಿದೆಯೆನ್ನಲಾಗಿದೆ.

**ಪಂಜಾಬ್‌ನಲ್ಲಿ ಬಾಸ್ಮತಿ ಉತ್ಪಾದನೆ 57 ಶೇಕಡಾ ಹೆಚ್ಚಳ**

2022-23 ರಲ್ಲಿ ಪಂಜಾಬ್‌ನಲ್ಲಿ ಬಾಸ್ಮತಿ ಉತ್ಪಾದನೆ 22 ಲಕ್ಷ ಟನ್‌ಗಳಿಗೇರಿದ್ದು ಮುಂದಿನ 3 ರಿಂದ 4 ತಿಂಗಳುಗಳಲ್ಲಿ ಮಾರುಕಟ್ಟೆಗೆ ಬರುವ ನಿರೀಕ್ಷೆಯಿದೆಯೆನ್ನಲಾಗಿದೆ. ಈ ವರ್ಷ ಖಾರೀಫ್ ಸೀಸನ್‌ನ ಬಾಸ್ಮತಿ ಉತ್ಪಾದನೆ ಹಿಂದಿನ ವರ್ಷದ 14 ಲಕ್ಷ ಟನ್‌ಗಳಿಂದ 57 ಶೇಕಡಾ ಹೆಚ್ಚಳವಾಗಿ 22 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ.

**ಕಾಫಿ ಅರೆಬಿಕಾ ICE ದರ 16 ತಿಂಗಳ ಕನಿಷ್ಠ ಮಟ್ಟಕ್ಕಿಳಿಕೆ**

ಅರೆಬಿಕಾ ಕಾಫಿ ICE ದರ 16 ತಿಂಗಳ ಕನಿಷ್ಠ ದರವಾದ $ 1.5(ಪೌಂಡ್) (2022 ನವೆಂಬರ್‌ನಲ್ಲಿ) ಸಮೀಪದಲ್ಲಿದ್ದು ಪೌಂಡ್‌ಗೆ $ 1.6 ಇದೆಯೆನ್ನಲಾಗಿದೆ. ಅರೆಬಿಕಾ ಕಾಫಿ ಇನ್ವೆಂಟರಿ ದಾಸ್ತಾನು 5 ತಿಂಗಳ ಗರಿಷ್ಠ ಮಟ್ಟಕ್ಕೇರಿದು 2022 ಡಿಸೆಂಬರ್ ಕೊನೆಗೆ 814,686 ಚೀಲಗಳಿಗೇರಿದೆಯೆನ್ನಲಾಗಿದೆ. ನವೆಂಬರ್‌ನಲ್ಲಿ 23 ವರ್ಷಗಳ ಕನಿಷ್ಠ ಮಟ್ಟವಾದ 382,695 ಚೀಲಗಳಿದ್ದ ದಾಸ್ತಾನು ಈಗ ಹೆಚ್ಚಳವಾಗಿದೆ. ದರ 2022 ರಲ್ಲಿ 26 ಶೇಕಡಾ ಕುಸಿತವಾಗಿದೆ. ಮಂದಗತಿಯ ಬೇಡಿಕೆ, ಪೂರೈಕೆ ಹಾಗೂ ಉತ್ಪಾದನೆಗೆ ಪೂರಕವಾದ ವಾತಾವರಣ ದರ ಇಳಿಕೆಯಾಗಲು ಪ್ರಮುಖ ಕಾರಣವೆನ್ನಲಾಗಿದೆ.